ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 9/4/21

# ಶೇ.8 ವೇತನ ಪರಿಷ್ಕರಣೆಗೆ ಸಿದ್ಧ

ಉವಾ 9/4/21

ಬೆಂಗಳೂರು: ಸಾರಿಗೆ ನೌಕರರನ್ನು ಯಾವುದೇ ಕಾರಣಕ್ಕೂ ಸರ್ಕಾರಿ ನೌಕರರು ಎಂದು ಪರಿಗಣಿಸಲು ಹಾಗೂ ಆರನೇ ವೇತನ ಆಯೋಗ ಜಾರಿ ಮಾಡಲು ಸಾಧ್ಯವೇ ಇಲ್ಲ, ಮಧ್ಯಂತರ ಪರಿಹಾರವಾಗಿ ಶೇ.8 ರಷ್ಟು ವೇತನ ಪರಿಷ್ಕರಣೆಗೆ ಸರ್ಕಾರ ಸಿದ್ಧವಿದೆ ಎಂದು ಸರ್ಕಾರ ತಿಳಿಸಿದೆ.

- **ಪ್ರಯಾಣಿಕರಿಗೆ ತೊಂದರೆಯಾಗದಂತೆ ಪರ್ಯಾಯ ಕ್ರಮದ ಭರವಸೆ**
- **6ನೇ ವೇತನ ಆಯೋಗ ಜಾರಿ ಸಾಧ್ಯವೇ ಇಲ್ಲ**

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್, ಮುಷ್ಕರ ಹಿನ್ನೆಲೆಯಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲಾಗಿದ್ದು 21 ಸಾವಿರ ಖಾಸಗಿ ಬಸ್ ಹಾಗೂ ಮ್ಯಾಕ್ಸಿಕ್ಯಾಬ್ ಸಂಚರಿಸುತ್ತಿವೆ ಎಂದು ಹೇಳಿದರು.

ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆಗೆ ನಾವು ಸಿದ್ಧ. ಈ ಹಿಂದೆಯೂ ನಾಲ್ಕು ವರ್ಷಕ್ಕೊಮ್ಮೆ ಶೇ.5 ರಿಂದ 12.50 ವರೆಗೂ ಪರಿಷ್ಕರಣೆ ಮಾಡಲಾಗಿದೆ. ಈಗಲೂ ಮಧ್ಯಂತರ ಪರಿಹಾರವಾಗಿ ಈಗ ಶೇ.8 ರಷ್ಟು ಪರಿಷ್ಕರಣೆಗೆ ಚುನಾವಣಾ ಆಯೋಗದ ಒಪ್ಪಿಗೆ ಕೇಳಿದ್ದು ಅನುಮತಿ ಸಿಕ್ಕರೆ ಈಗಲೇ ಮಾಡಲಾಗುವುದು. ನಂತರ ಮಾತುಕತೆ ನಡೆಸಿ ಇಂತಿಷ್ಟು ಎಂದು ನಿಗದಿಯಾದರೆ ಉಳಿದದ್ದು ಹೆಚ್ಚುವರಿ ಪರಿಷ್ಕರಣೆ ಮಾಡಲಾಗುವುದು ಎಂದು ತಿಳಿಸಿದರು. ತರಬೇತಿ ಅವಧಿ 2 ವರ್ಷದಿಂದ ಒಂದು ವರ್ಷಕ್ಕೆ ಇಳಿಸುವ ಹಾಗೂ ಅಂತರ ನಿಗಮ ವರ್ಗಾವಣೆ ಬೇಡಿಕೆ ಸೇರಿ 9 ಬೇಡಿಕೆ ನಾವು ಒಪ್ಪಿದ್ದೇವೆ. ಮುಷ್ಕರದಿಂದ ದಿನಕ್ಕೆ 20 ಕೋಟಿ ರೂ. ನಷ್ಟವಾಗುತ್ತಿದೆ. ಕಳೆದ ವರ್ಷ ಕೊರೊನಾ ಹಿನ್ನೆಲೆಯಲ್ಲಿ 4 ಸಾವಿರ ಕೋಟಿ ರೂ. ನಷ್ಟವಾಗಿತ್ತು. ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರ 2300 ಕೋಟಿ ರೂ. ನೆರವು ನೀಡಿ ನೌಕರರ ಸಂಬಳಕ್ಕೆ ತೊಂದರೆಯಾಗದಂತೆ ನೋಡಿಕೊಂಡಿತು ನೌಕರರ ಸಂಘಟನೆಗಳು ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕು ಎಂದರು.

ಖಾಸಗಿ ಬಸ್‌ಗಳು ಹೆಚ್ಚು ಶುಲ್ಕ ಪಡೆಯುತ್ತಿವೆ ಎಂಬ ದೂರುಗಳಿದ್ದು ತಪಾಸಣೆ ನಡೆಸಿ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

> **ಪರ್ಮಿಟ್ ಇಲ್ಲದೆ ಖಾಸಗಿ ಬಸ್ ಸಂಚರಿಸಲು ಮುಂದಿನ ಆದೇಶದವರೆಗೂ ಅವಕಾಶ ನೀಡಿದ್ದೇವೆ. ರಸ್ತೆ ತೆರಿಗೆ ಕಟ್ಟಲು ಸಾಧ್ಯವಾಗದೆ ಪರ್ಮಿಟ್ ಒಪ್ಪಿಸಿದ್ದ 18 ಸಾವಿರ ಬಸ್‌ಗಳಿಗೆ ತಿಂಗಳ ಮಟ್ಟಿಗೆ ವಿನಾಯಿತಿ ನೀಡಿ ಸಂಚರಿಸಲು ಅವಕಾಶ ಮಾಡಿಕೊಟ್ಟಿದ್ದೇವೆ.**
>
> **ಅಂಜುಂ ಫರ್ವೇಜ್**, ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ

# ಈಶಾನ್ಯ ಸಾರಿಗೆಗೆ ನಿತ್ಯ 4.5 ಕೋಟಿ ನಷ್ಟ

ಕಲಬುರಗಿ: ನೌಕರರ ಮುಷ್ಕರದ ನಡುವೆಯೂ ಈಶಾನ್ಯ ಸಾರಿಗೆ ಸಂಸ್ಥೆಯಿಂದ ಗುರುವಾರ 123 ಮಾರ್ಗಗಳಲ್ಲಿ ಸಾರಿಗೆ ಬಸ್‌ಗಳ ಸಂಚಾರ ನಡೆಸಲಾಗಿದೆ. ಇದು ರಾಜ್ಯದಲ್ಲೇ ಅತಿ ಹೆಚ್ಚು ಸರಾಸರಿ ಕಾರ್ಯಾಚರಣೆಯಾಗಿದೆ. ಹೊಸದಾಗಿ ರಚನೆಯಾದ ವಿಜಯನಗರ ಸೇರಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ಮತ್ತು ಪಕ್ಕದ ವಿಜಯಪುರ ಜಿಲ್ಲಾ ವ್ಯಾಪ್ತಿಯನ್ನು ಸಂಸ್ಥೆ ಹೊಂದಿದ್ದು ಒಟ್ಟು 2,535 ಮಾರ್ಗಗಳಲ್ಲಿ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ.

- **ರಾಜ್ಯದಲ್ಲೇ ಅತಿ ಹೆಚ್ಚು ಸರಾಸರಿ ಕಾರ್ಯಾಚರಣೆ**

ಆದರೆ, ಮುಷ್ಕರದ ಕಾರಣ ಶೇ.4.9 ಸಾಧನೆಯಾಗಿದೆ. ಅದೇ ರೀತಿ ಕೆಎಸ್‌ಆರ್‌ಟಿಸಿಯಲ್ಲಿ ಶೇ.3ರಷ್ಟು, ಬಿಎಂಟಿಸಿ ಮತ್ತು ವಾಯವ್ಯ ಸಾರಿಗೆ ಸಂಸ್ಥೆಯು ತಲಾ ಶೇ.1.2ರಷ್ಟು ಸಾಧನೆಯಾಗಿದೆ. ಮುಷ್ಕರದಿಂದ ಪ್ರತಿನಿತ್ಯ ಈಶಾನ್ಯ ಸಾರಿಗೆ ಬರಬೇಕಿದ್ದ 4.5 ಕೋಟಿ ರೂ. ನಷ್ಟವಾಗುತ್ತಿದೆ.

ನೌಕರರ ಮುಷ್ಕರದಿಂದ ಸಾರ್ವಜನಿಕರ ತೊಂದರೆ ತಪ್ಪಿಸುವ ನಿಟ್ಟಿನಲ್ಲಿ ಸಾರಿಗೆ ಸಂಸ್ಥೆ ಖಾಸಗಿ ವಾಹನಗಳ ಮೊರೆ ಹೋಗಿದ್ದು ಗುರುವಾರ 3,424 ಖಾಸಗಿ ವಾಹನ ಬಳಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ 276 ಬಸ್‌ಗಳು ಸೇರಿವೆ. ಉಳಿದಂತೆ 5934 ಮ್ಯಾಕ್ಸಿಕ್ಯಾಬ್‌ಗಳು, 542 ಟಂಟಂಗಳು, 1,952 ಜೀಪ್-ಕ್ರೂಸರ್‌ಗಳು, 432 ಆಟೋಗಳು ಮತ್ತು 163 ಇತರ ಖಾಸಗಿ ವಾಹನಗಳು ಸಂಚರಿಸಿವೆ.

## ವಾಯವ್ಯ ಸಾರಿಗೆಗೆ 4 ಕೋಟಿ ಖೋತಾ

ಹುಬ್ಬಳ್ಳಿ: ಸಾರಿಗೆ ನೌಕರರ ಮುಷ್ಕರದ ಎರಡನೇ ದಿನ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಅಂದಾಜು 4 ಕೋಟಿ ರೂ. ಆದಾಯ ಖೋತಾ ಆಗಿದೆ. ಸಂಸ್ಥೆಯ 9 ವಿಭಾಗ ವ್ಯಾಪ್ತಿಯಲ್ಲಿ ಗುರುವಾರ ಒಟ್ಟು 48 ಬಸ್‌ಗಳನ್ನು ರಸ್ತೆಗಿಳಿಸುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ತರಬೇತಿ ಚಾಲನಾ ಸಿಬ್ಬಂದಿ ಟಾರ್ಗೆಟ್ ಮಾಡಿದ್ದು ಕರ್ತವ್ಯಕ್ಕೆ ಹಾಜರಾಗದಿದ್ದರೆ ಸೇವೆಯಿಂದ ವಜಾಗೊಳಿಸುವ ಲಿಖಿತ ಎಚ್ಚರಿಕೆ ನೀಡಲಾಗಿದೆ. ಕೂಡಲೇ ಕರ್ತವ್ಯಕ್ಕೆ ಹಾಜರಾಗುವ ಸಿಬ್ಬಂದಿಗೆ ಅಪೇಕ್ಷಿಸಿದ ಅನುಸೂಚಿ ನೀಡುವುದಾಗಿಯೂ ಸಂಸ್ಥೆ ತಿಳಿಸಿದೆ.